ಖಾಸಗಿ ವೈದ್ಯಕೀಯ ಕಾಲೇಜುಗಳಲ್ಲಿ ಸೀಟ್ ಬ್ಲಾಕಿಂಗ್ ತಡೆಗಟ್ಟುವುದು

189(158); ಶ್ರೀ ಗೋಪಾಲಯ್ಯ ಕೆ. (ಮಹಾಲಕ್ಷ್ಮಿ ಲೇಔಟ್)

ಅ) ರಾಜ್ಯದಲ್ಲಿನ ಕೆಲವು ಖಾಸಗೀ ವೈದ್ಯಕೀಯ ಕಾಲೇಜುಗಳಲ್ಲಿ ಸೀಟ್ ಬ್ಲಾಕಿಂಗ್ ದಂಧೆ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಇದನ್ನು ತಡೆಗಟ್ಟಲು ಸರ್ಕಾರ ಕೈಗೊಂಡ ಕ್ರಮಗಳೇನು

ಡಾ॥ ಶರಣಪ್ರಕಾಶ್ ಆರ್. ಪಾಟೀಲ್ (ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು)

ಅ) ಬಂದಿದೆ.

ಆ) ಸೀಟ್ ಬ್ಲಾಕಿಂಗ್ ತಡೆಗಟ್ಟಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.

ಎ) Karnataka Conduct of Entrance test for selection and admission to Post Graduate Medical, Dental Degree and Diploma Course Rule – 2006 ರ ನಿಯಮ 15 ಕ್ಕೆ ತಿದ್ದುಪಡಿ ಮಾಡಿ, ಸೀಟುಗಳನ್ನು ಆಯ್ಕೆ ಮಾಡಿಕೊಂಡು ಕಾಲೇಜಿಗೆ ಸೇರದೇ ಸೀಟು ಸರೆಂಡರ್ ಮಾಡಿದಲ್ಲಿ ಸ್ನಾತಕೋತ್ತರ ಪದವಿಗೆ ` 10,000/– ದಿಂದ ` 1.00 ಲಕ್ಷಗಳಿಗೆ ಹಾಗೂ ಡಿಪ್ಲೊಮಾ ಕೋರ್ಸಿಗೆ ` 5,000/– ದಿಂದ ` 50,000/– ಗಳಿಗೆ ದಂಡವನ್ನು ಹೆಚ್ಚಿಸಲಾಗಿದೆ.

ಬಿ) ಕೋರ್ಸಿಗೆ ಸೇರಿ ವ್ಯಾಸಂಗ ಪೂರೈಸುವ ಮುನ್ನ ಬಿಟ್ಟು ಹೋದಲ್ಲಿ, ಸ್ನಾತಕೋತ್ತರ ಪದವಿಗೆ ದಂಡದ ಮೊತ್ತವನ್ನು ` 50,000/– ದಿಂದ ` 5,00,000/– ಗಳಿಗೆ ಹಾಗೂ ಸ್ನಾತಕೋತ್ತರ ಡಿಪ್ಲೊಮಾ ಕೋರ್ಸಿಗೆ ` 25,000/– ದಿಂದ ` 2,50,000/– ಗಳಿಗೆ ಹೆಚ್ಚಿಸಲಾಗಿದೆ.

ಸಿ) COMED-K ಹಾಗೂ KRLMP ಪರೀಕ್ಷೆ ನಡೆಯುವಾಗ impersonation ಆಗುವುದನ್ನು ತಡೆಗಟ್ಟಲು, ಪರೀಕ್ಷೆಯ ದಿನ ಸರ್ಕಾರದಿಂದ ಅಧಿಕಾರಿಗಳನ್ನು ಪರಿವೀಕ್ಷಣೆಗಾಗಿ ನಿಯೋಜಿಸಲಾಗಿದೆ.

ಡಿ) RGUHS ಗೆ ಪತ್ರ ಬರೆದು ಪ್ರವೇಶಕ್ಕೆ ಅನುಮತಿ ನೀಡುವಾಗ ಸೀಟುಗಳನ್ನು respective mode of selection ನಿಂದ ತುಂಬಿರುವುದನ್ನು ಖಚಿತಪಡಿಸಿಕೊಳ್ಳಲು ತಿಳಿಸಲಾಗಿದೆ.

ಇ) Monitoring ಸಮಿತಿಯನ್ನು ರಚಿಸಲಾಗಿದ್ದು, consensual agreement ನಂತೆ ಸೀಟುಗಳು ತುಂಬುವುದನ್ನು ಖಚಿತಪಡಿಸಿಕೊಳ್ಳಲಾಗುತ್ತದೆ.

ರಾಜ್ಯದಲ್ಲಿ ಜರುಗಲಿರುವ ಜಾತಿವಾರುಸ ಸಮೀಕ್ಷೆ

190(305); ಶ್ರೀ ಹ್ಯಾರಿಸ್ ಎನ್.ಎ. (ಶಾಂತಿನಗರ)

1) ದೇಶದಲ್ಲಿ ಮೊಟ್ಟ ಮೊದಲ ಬಾರಿಗೆ ಸರ್ಕಾರ ನಡೆಸುತ್ತಿರುವ ಜಾತಿವಾರು ಸಾಮಾಜಿಕ ಶೈಕ್ಷಣಿಕ ಸಮೀಕ್ಷೆಯ ಕುರಿತಾದ ಸಿದ್ದತೆಯ ವಿವರಗಳೊಂದಿಗೆ ಅದಕ್ಕೆ ನಿಗಧಿಪಡಿಸಿರುವ ಕಾಲಮಿತಿ ವಿವರಗಳನ್ನು ನೀಡುವುದು;

2) ಜಾತಿವಾರು ಸಮೀಕ್ಷೆ ಜವಾಬ್ದಾರಿಯನ್ನು ನಿರ್ವಹಿಸುವ ಉನ್ನತ ಮಟ್ಟದ ಅಧಿಕಾರಿಗಳು ಮತ್ತು ಅವರ ಕಾರ್ಯವ್ಯಾಪ್ತಿಗಳೇನು (ವಿವರ ನೀಡುವುದು)

3) ರಾಜ್ಯದ ಹಿಂದುಳಿದ ವರ್ಗಗಳ ಆಯೋಗ ನಡೆಸುವ ಸಮಿತಿಗೆ ಅಧ್ಯಕ್ಷರು ಮತ್ತು ಸದಸ್ಯರುಗಳನ್ನು ನೇಮಿಸುವ ಮತ್ತು ಇದುವರೆವಿಗೂ ಆಯೋಗದ ಸದಸ್ಯತ್ವ ದೊರಕದ ಹಿಂದುಳಿದ ಜಾತಿಗಳ ಅರ್ಹರಿಗೆ ಸದಸ್ಯತ್ವವನ್ನು ನೀಡುವ ಕುರಿತು ಸರ್ಕಾರದ ನಿಲುವುಗಳೇನು ಹಾಗೂ ನೇಮಕಾತಿ ಕುರಿತು ಕೈಗೊಂಡ ಕ್ರಮಗಳೇನು?